**ಓಎಸ್ ನಂಃ 31/2013 ಪಿಡಬ್ಲ್ಯೂ- 1**

**ದಿನಾಂಕಃ 08.01.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ ಜಿ.ಎಂ.ಐ. ವಕೀಲರಿಂದಃ**

**ನಾನು ಈ ದಾವೆಯಲ್ಲಿ ವಾದಿಯ ಪರ ಸಾಕ್ಷಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಶಪಥ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನನ್ನ ಹೇಳಿಕೆಯ ಮೇರೆಗೆ ತಯಾರಿಸಿದ್ದಾರೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ, ಇದರಲ್ಲಿ ಇರುವ ಸಹಿ ನನ್ನದು.**

ಸಾಕ್ಷಿಯು ಆರ್.ಆರ್.ಟಿ. 308/1981-82 ರ ಆದೇಶ ದೃಢೀಕೃತ ನಕಲನ್ನು ನಿಪಿ 1 ಎಂದು, ಹಿಸ್ಸಾ ಟಿಪ್ಪಣಿ ಉತಾರ್ ಅನ್ನು ನಿಪಿ 2 ಎಂದು, ಪಹಣಿಗಳನ್ನು ನಿಪಿ 3 ರಿಂದ 17 ಎಂದು, ತಿಳುವಳಿಕೆ ಪತ್ರದ ಕಚೇರಿ ನಕಲನ್ನು ನಿಪಿ 18 ಎಂದು, ಪ್ರತ್ಯುತ್ತರ ಪತ್ರವನ್ನು ನಿಪಿ 19 ಎಂದು, ದಿನಾಂಕಃ 13.03.2002 ರ ನೋಂದಣಿ ಟ್ರಸ್ಟ್ ಡೀಡ್ ಅನ್ನು ನಿಪಿ 20 ಎಂದು, ಶಿಕ್ಷಣಾಧಿಕಾರಿ ಜ್ಞಾಪನ ಪತ್ರವನ್ನು ನಿಪಿ 21 ಎಂದು, ಮುಖ್ಯೋಪಾಧ್ಯಾಯರ ದೃಢೀಕರಣ ಪತ್ರವನ್ನು ನಿಸಪಿ 22 ಎಂದು, ನಮೂನೆ-2 ಅನ್ನು ನಿಪಿ 23 ಎಂದು, ಸ್ಥಳ ವರದಿಯನ್ನು ನಿಪಿ 24 ಎಂದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮುಂಜೂರಾತಿ ಕಚೇರಿ ನಕಲನ್ನು ನಿಪಿ 25 ಎಂದು, ಡಿಮ್ಯಾಂಡ್ ರಿಜಿಸ್ಟರ್ ಅನ್ನು ನಿಪಿ 26 ಎಂದು, ಅಸೆಸ್ ಮೆಂಟ್ ಎಕ್ಸ್ ಟ್ರ್ಯಾಕ್ಟ್ ಅನ್ನು ನಿಪಿ 27 ಎಂದು, ಕಂದಾಯ ರಸೀದಿಯನ್ನು ನಿಪಿ 28 ಎಂದು, ಪೊಟೋಗಳನ್ನು ಒಟ್ಟಾಗಿ ನಿಪಿ 29 ಎಂದು, ನೆಗಟಿವ್ ಅನ್ನು ನಿಪಿ 30 ಎಂದು, ಬಿಲ್ ಅನ್ನು ನಿಪಿ 31 ಎಂದು, ಅಸಲು ದಾವಾ ಸಂ. 258/2008 ರ ಆದೇಶ ಪ್ರತಿಯ ದೃಡೀಕೃತ ನಕಲನ್ನು ನಿಪಿ 32 ಎಂದು, ಆರ್.ಎ. 93/2019 ರ ಆದೇಶದ ದೃಡೀಕೃತ ನಕಲನ್ನು ನಿಪಿ 33 ಎಂದು, ಅಸಲುದಾವಾ ಸಂ. 21/2015 ರ ಆದೇಶಪುಟಗಳ ನಕಲನ್ನು ನಿಪಿ 34

ಎಂದು, ಅಸಲು ದಾವಾ ಸಂ. 21/2015 ರ ವಾದಪತ್ರದ ನಕಲನ್ನು ನಿಪಿ 35 ಎಂದು, ಅಸಲು ದಾವಾ ಸಂ. 21/2015 ರ ವಾದಪತ್ರದ ತಿದ್ದುಪಡಿ ನಕಲನ್ನು ನಿಪಿ 36 ಎಂದು, ಅಸಲು ದಾವಾ ಸಂ. 21/2015 ರ ರಾಜಿ ಅರ್ಜಿಯ ನಕಲನ್ನು ನಿಪಿ 37 ಎಂದು, ಎ.ಸಿ. ರವರ ಆದೇಶದ ನಕಲನ್ನು ನಿಪಿ 38 ಎಂದು, ಎ.ಸಿ. ರವರ ಆದೇಶಪುಟಗಳ ನಕಲನ್ನು ನಿಪಿ 39 ಎಂದು, ಎ.ಸಿ. ರವರ ಮೆಮೋ, ಅರ್ಜಿ, ದಾಖಲಾತಿ, ತಕರಾರಿನ ನಕಲನ್ನು ಒಟ್ಟಾಗಿ ನಿಪಿ 40 ಎಂದು, ಅಧಿಕಾರ ಪತ್ರವನ್ನು ನಿಪಿ 41 ಎಂದು ಗುರುತಿಸಲಾಯಿತು.

ಮರು ವಿಚಾರಣೆಃ ಇಲ್ಲ.

<u>ಪಾಟಿಸವಾಲುಃ ಪ್ರತಿವಾದಿ ಪರ ಶ್ರೀ ಟಿ.ಎನ್.ಎಸ್. ವಕೀಲರಿಂದಃ</u>

ನಿಮ್ಮ ತಂದೆ ಅಸಲು ದಾವಾ ಸಂ. 258/2008 ದಾವೆ ಹಾಕಿರುತ್ತಾರೆ ಅದರ ಬಗ್ಗೆ ಗೊತ್ತಾ ಎಂದರೆ ಗೊತ್ತು. ಸದರಿ ದಾವೆ ಸಂ. 258/2008 ರಲ್ಲಿ ಇರುವ ಸಹಿ ನಿಮ್ಮ ತಂದೆಯದ್ದು ಎಂದರೆ ಹೌದು. ಸದರಿ ದಾವೆಯಲ್ಲಿರುವ ವಿಚಾರ ತಿಳಿದುಕೊಂಡಿರುತ್ತೀರಾ ಎಂದರೆ ತಿಳಿದುಕೊಂಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ಸತ್ಯವಾಗಿರುತ್ತದೆ. ಸದರಿ ದಾವೆಯಲ್ಲಿ ಪ್ರತಿವಾದಿ ಶಾಮಣ್ಣ ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಅದನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ತಿಳಿದುಕೊಂಡಿರುತ್ತೇನೆ. ಸದರಿ ಪ್ರತಿವಾದಿ ಪತ್ರದಲ್ಲಿ ಇರುವ ವಿಚಾರ ಸತ್ಯವಾಗಿರುತ್ತದೆಯಾ ಎಂದರೆ ಸುಳ್ಳು ಎನ್ನುತ್ತಾರೆ. ಸದರಿ ಪ್ರತಿವಾದ ಪತ್ರದಲ್ಲಿ ಯಾವ ವಿಚಾರ ಸುಳ್ಳು ಇರುತ್ತದೆ ಎಂದರೆ ಜಮೀನು ನಮ್ಮದು ಎಂದು ಬರೆದಿರುತ್ತಾರೆ ಸದರಿ ವಿಚಾರ ಸುಳ್ಳು ಸದರಿ ದಾವೆಯಲ್ಲಿ ಅಸಲು ದಾವಾ ಸಂ. 258/2008 ಒಂದು ತಿದ್ದುಪಡಿ ಅರ್ಜಿ ಸಲ್ಲಿಸಿರುತ್ತಾರೆ ಸದರಿ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅರ್ಜಿಯ ವಿರುದ್ಧ ಮೇಲ್ಮನವಿಯನ್ನು ಯಾರು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿ ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಅರ್ಜಿ

ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ. ನಂತರ ಸದರಿ ದಾವೆಯಲ್ಲಿ ಹೈ ಕೋರ್ಟ್ ನಲ್ಲಿ ಯಾವ ಕಾರಣಕ್ಕೆ ವಾಪಸ್ಸು ಪಡೆದುಕೊಂಡಿರುತ್ತೀರಾ ಎಂದರೆ ಸರಿಯಾಗಿ ಹಾಕಿಲ್ಲ ಎಂದು ವಾಪಸ್ಸು ಪಡೆದುಕೊಂಡಿರುತ್ತೆವೆ. ಹೈ ಕೋರ್ಟ್ ವಜಾ ಆದ ಕಾರಣ ಮತ್ತು ಹೊಸ ದಾವೆಯಲ್ಲಿ ಎಲ್ಲಾ ಕಾರಣಗಳನ್ನು ಸೇರಿಸಿ ಹಾಕಿರುತ್ತೀರಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದಮರೆದು ಸರಿಯಾಗಿ ಹಾಕಿಲ್ಲ ಎಂದು ಮತ್ತೆ ಹಾಕಿರುತ್ತೇವೆ. ಪ್ರಸ್ತುತ ದಾವೆ ಯಾವ ಪರಿಹಾರ ಕೋರಿ ಹಾಕಿರುತ್ತೀರಾ ಎಂದರೆ ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಬಂದಕಾಜ್ಞೆ ಕೋರಿ ಹಾಕಿರುತ್ತೆವೆ. ಯಾವ ಆಸ್ತಿಗೆ ದಾವೆ ಇರುತ್ತದೆ ಎಂದರೆ ಸ.ನಂ. 24/4 ರ 28 ಗುಂಟೆಗೆ ಹಾಕಿರುತ್ತೆವೆ. ಸದರಿ ಆಸ್ತಿ ಯಾರಿಗೆ ಸೇರಿರುತ್ತದೆ ಎಂದರೆ ನನಗೆ ಎಂದು ಹೇಳಿ ನಂತರ ನನ್ನ ತಂದಗೆ ಸೆರೀರುತ್ತದೆ ಎನ್ನುತ್ತಾರೆ. ಸದರಿ ಆಸ್ತಿ ನಿಮ್ಮ ತಂದೆಗೆ ಹೇಗೆ ಬಂತು ಎಂದರೆ ಸಾಕ್ಷಿ ಆರ್.ಆರ್.ಟಿ. ಕೇಸ್ ಮುಂಖಾತರ ಬಂದಿರುತ್ತದೆ. ಮಂಗಮ್ಮ ಎಂಬುವವರ ಮಗ ನಮಗೆ ಖಾತೆ ಆಗಬೇಕೆಂದು ಹೇಳಿರುತ್ತಾರೆ. ಸದರಿ ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೆನೆ. ಆರ್. ಆರ್. ಟಿ ಅಡಿಯಲ್ಲಿ ಬಂದಿರುವ ಆಸ್ತಿ ಬಿಟ್ಟು ಬೇರೆ ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಅಗ್ರಿಮೆಂಟ್ ಕೊಟ್ಟಿರುತ್ತೆನೆ. ಸ.ನಂ. ಪೂರ್ತಿ ವಿಸಿರ್ಣ 1 ಎಕರೆ 2 ಗುಂಟೆ. ಸದರಿ ಆಸ್ತಿ ಮೂಾಲವಾಗಿ ಯಾರಿಗೆ ಸೇರೀರುತ್ತದೆ ಎಂದರೆ ರಂಗಪ್ಪ ಎಂಬುವವರಿಗೆ ಸೆರೀರುತ್ತದೆ. ದಿಃ 15.07.1950 ಸೆಟಲ್ ಮೆಂಟ್ ಡೀಡ್ ಯಾರು ಯಾರಿಗೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಮತ್ತಾತನಿಗೆ 3 ಜನ ಗಂಡು ಮಕ್ಕಳು ಅವರುಗಳು ವೆಂಕಟಪ್ಪ, ನಾರಾಯಣಸ್ವಾಮಿ ವೆಂಕಟರಾಯಪ್ಪ ಮತ್ತು ಮಂಗಮ್ಮ. ದಾವಾ ಆಸ್ತಿಯಲ್ಲಿ ವೆಂಕಟಪ್ಪನಿಗೆ 14 ಗುಂಟೆ, ಮಂಗಮ್ಮನಿಗೆ 28 ಗುಂಟೆ, ವೆಂಕಟಪ್ಪ ಎಂದರೆ ನಿಮ್ಮ ತಾತ ಎಂದರೆ ಹೌದು. ಮಂಗಮ್ಮ ಎಂದರೆ ಪ್ರತಿವಾದಿ ತಾಯಿ ಎಂದರೆ ಹೌದು. ಮಂಗಮ್ಮನಿಗೆ ದಿಃ 15.07.1950 ರ ಸೇಟಲ್ ಮೆಂಟ್ ಡೀಡ್ ಪ್ರಕಾರ ಮಂಗಮ್ಮನಿಗೆ ಬಂದಿರುವ ಆಸ್ತಿಯ ವಿರುದ್ದ ದಾವೆ ಸಲ್ಲಿಸಿರುತ್ತೀರಾ ಎಂದರೆ ಹೌದು.

14 ಗುಂಟೆಗೆ ಚಕ್ಕುಬಂದಿ ಗೊತ್ತಾ ಎಂದರೆ ಸರ್ವೆ ಆಗಿಲ್ಲ ಎನ್ನುತ್ತಾರೇ. ಪ್ರಸ್ತುತ ದಾವೇಯಲ್ಲಿ ಚಕ್ಕುಬಂದಿಯನ್ನು 1 ಎಕರೆ 2 ಗುಂಟೆ ಅಥವಾ 28 ಗುಂಟೆಚಕ್ಕುಬಂದಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ 1 ಎಕರೆ 2 ಗುಂಟಗೆ ಚಕ್ಕುಬಂದಿ ಕೊಟ್ಟಿರುತ್ತೆನೆ. 28 ಗುಂಟೆಗೆ ದಾವೆಯನ್ನು ಹಾಕಿ 1 ಎಕರೆ 2 ಎಕರೆಗೆ ಚಕ್ಕುಬಂದಿ ಯಾವ ಕಾರಣಕ್ಕೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಸರ್ವೆ ಆಗಿರುವುದಿಲ್ಲ ಎನ್ನುತ್ತಾರೆ. ವೆಂಕಟಪ್ಪನ 14 ಗುಂಟೆ 1 ಎಕರೆ 2 ಗುಂಟೆ ಚಕ್ಕುಬಂದಿಯಲ್ಲಿ ಬರುತ್ತದೆ ಎಂದರ ಹೌದು. 28 ಗುಂಟೆ ದಾವೆ ಹಾಕಬೇಕಾದರೆ ಯಾರ ಹಸೆರಿನಲ್ಲಿ ಇರುತ್ತದೆ ಎಂದರೆ ಮಂಗಮ್ಮನ ಹೆಸರಿನಲ್ಲಿ ಇರುತ್ತದೆ. ನಂತರ ಶಾಮಣ್ಣ ಪ್ರತಿವಾದಿಗೆ ಬಂದಿರುತ್ತದೆ. ಶಾಮಣ್ಣನ ಹೆಸರಿಗೆ ಖಾತೆ ಪಹಣಿ ಬಂದ ನಂತರ ಎ ಸಿ, ಡಿ ಸಿ ನಾಯಲಯಕ್ಕೆ ಹೋಗಿರುತ್ತೀರ ಎಂದರೆ ಹೋಗಿರುತ್ತೆನೆ. ನಿಮಗೆ ಯಾವ ದಾಖಲಾತಿಯಿಂದ ಮಾಲಿಕತ್ವ ಬಂದಿರುತ್ತದೆ ಎಂದರೆ ಆರ್ ಆರ್,ಟಿ. ಮತ್ತು ಅಗ್ರಿಮೆಂಟ್ ನಿಂದ ಬಂದಿರುತ್ತದೆ. ಸದರಿ ಅಗ್ರಿಮೆಂಟ್ 1982 ನೇ ಇಸವಿಯದ್ದು. ಸದರಿ ಅಗ್ರಿವೆಸುಂಟ್ ರಿಜಿಸ್ಟರ್ ಮಾಡಿಕೊಡಬೇಕೆಂದು ದಾವೆ ಹಾಕಿರುತ್ತೀರಾ ಎಂದರೆ ಹಾಕಿರುತ್ತೇವೆ. ಸಾಕ್ಷಿ ಮುಂದಮರೆದು ದಾವೆ ಸಲ್ಲಿಸಿಲ್ಲ ಎನ್ನುತ್ತಾರೆ. ಯಾವ ಕಾರಣಕ್ಕೆ ಅಗ್ರಿಮೆಂಟ್ ಮೇಲೆ ದಾವೆ ಹಾಕಿಲ್ಲ ಎಂದರೆ ರಿಜಿಸ್ರ್ ಮಾಡಿಕೊಡುತ್ತೇವೆ ಎಂದು ಹೇಳುತ್ತಿದ್ದರು ಎನ್ನುತ್ತಾರೆ. ಪ್ರಸುತ್ತ ದಾವೆ ಸಲ್ಲಿಸುವವರೆಗೂ ಹೇಳಿರುತ್ತಾರೆ. 2008 ನೇ ಇಸವಿಯಲ್ಲಿ ಅಗ್ರಿಮೆಂಟ ಪ್ರಕಾರ ಕ್ರಯ ಪತ್ರ ಮಾಡಿಕೊಡುವುದಿಲ್ಲ ಎಂದು ಹೇಳಿರುತ್ತಾರೆ. 2008 ನೇ ಇಸವಿಯಿಂದ ಸದರಿ ಕರಾರು ಪತತ್ರದ ವಿರುದ್ದ ದಾವೆಯನ್ನು ಯಾಕೆ ಸಲ್ಲಿಸಿಲ್ಲ ಎಂದರೆ ಆರ್ ಆರ್ ಟಿ ಪ್ರಕರಣ ಇದ್ದ ಕಾರಣ ಹಾಕಿಲ್ಲ. ಆರ್ ಆರ್ ಟಿ ಮೇಲೆ ಹಕ್ಕು ಬಂದಿರುತ್ತದೆ ಎಂದು ಪ್ರಸುತ್ತ ದಾವೆಯನ್ನು ಸಲ್ಲಿಸಿರುತ್ತೀರಾ ಅಥವಾ ಬೇರೆ ಯಾವ ಕಾರಣಕ್ಕೆ ಹಾಕಿರುತ್ತೀರಾ ಎಂದರೆ ಆರ್ ಆರ್ ಟಿ ಪ್ರಕರಣದಲ್ಲಿ ಬಂದ ಆದೇಶದ ಪ್ರಕಾರ ಹಾಕಿರುತ್ತೆನೆ. ಅಸಲು ದಾವಾ ಸಂ. 258/2008 ದಾವೆಯಲ್ಲಿ ಯಾವ

ಕಾರಣದಿಂದ ಮಾಲಿಕತ್ವ ಬಂದಿರುತ್ತದೆ ಎಂದು ನಿಮ್ಮ ತಂದೆ ದಾವೆ ಹಾಕಿರುತ್ತಾರೆ ಸದರಿ ವಿಚಾರ ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ದಾವೇಯ ಪತ್ರ ನೀಡಿರುತ್ತೀರ ಎಂದರೆ ಇಲ್ಲ.. ನಿಮ್ಮ ತಂದೆ ಯಾವ ಕೆಲಸ ಮಾಡುತ್ತಾರೆ ಎಂದರೆ ಕೆ ಎಸ್ ಆರ್ ಟಿ. ಸಿ. ಕೆಲಸ ಮಾಡುತ್ತಿದ್ದರು ಈಗ ನಿವೃತಿ ಹೊಂದಿರುತ್ತಾರೆ. ಪ್ರಸುತ್ತದ ದಾವೆಯ ಬಗ್ಗೆ ಯಾವ ವರ್ಷದಿಂದ ಗೊತ್ತು ಎಂದರೆ 2013 ರ ನಂತರದಲ್ಲೆ ಗೊತ್ತಾಗಿರುತ್ತದೆ. ಯಾರಿಂದ ದಾವೆಯ ಬಗ್ಗೆ ತಿಳಿದುಕೊಕಂಡಿರುತ್ತೀರಾ ಎಂದರೆ ನನ್ನ ತಂದೆಯಿಂದ ತಿಡಿಳಿದುಕೊಂಡಿರುತ್ತೆನೆ. ಅಸಲು ದಾವಾ ಸಂ. 258/2008 ಬಗ್ಗೆ ನಿಮ್ಮ ತಂದೆಯನ್ನು ಕೇಳಿ ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ನಿಮ್ಮ ತಂದಗೆ ಅಸಲು ದಾವಾ ಸಂ. 258/2008 ನೋಂದಾಣಿ ಆಗದ ಕ್ರಯ ಪತ್ರ ಹಾಕಿರುತೀರಿ ಅದರ ಬಗ್ಗೆ ಗೊತ್ತಾ ಎಂದರೆ ಸಾಕ್ಷಿ 1982 ರಲ್ಲಿ ಆಗಿರುತ್ತದೆ. ಯಾವ ಕಾರಣಕ್ಕಾಗಿ ನೊಂದಣಿ ಆಗಿಲ್ಲ ಎಂದರೆ ಫ್ರಾಗ್ ಮೆಂಟೆಶನ್ ಎನ್ನುತ್ತಾರೆ. ಪ್ರಸ್ತುತ ದಾವೆಯ ದಾವಾ ಆಸ್ತಿ ಖಾತೆ ಪಹಣಿ ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಯಿ ಲಕ್ಷ್ಮೀ ಎಂಬುವವರ ಹೆಸರಿನಲ್ಲಿ ಇರುತ್ತದೆ. ಸಾಯಿ ಲಷ್ಮೀ ಯಾರು ಎಂದರೆ ಶಾಮಣ್ಣದ ದೊಡ್ಡ ಮಗನ ಹೆಂಡತಿ. ಶಾಮಣ್ಣ ಮತ್ತು ಸಾಯಿ ಲಕ್ಷ್ಮಿ ಗಂಡ ತೀರಿಕೊಂಡಿರುತ್ತಾರೆ ಎಂದರೆ ಹೌದು. ಸದರಿ ಸಾಯಿ ಲಕ್ಷ್ಮೀ ರವರಿಗೆ ಯಾವ ಆಧಾರ ಮೇಲೆ ಖಾತೆ ಪಹಣಿ ಬಂದಿರುತ್ತದೆ ಪವತಿ ವಾರಸು ಮೇಲೆ ಬಂದಿರುತ್ತದೆ. ನಿಪಿ 37 ವಿಭಾಗದ ದಾವೆ ಮತ್ತು ರಾಜಿ ಆರ್ಜಿ ಎಂದರೆ ಹೌದು. ಅದರಲ್ಲಿ ಸಾಯಿ ಲಕ್ಷ್ಮಿ ಗಂಡ ಶ್ರೀನಾಥ ರವರಿಗೆ ದಾವಾ ಆಸ್ತಿ ಬಂದಿರುತ್ತದೆ ಎಂದರೆ ಹೌದು. ಸದರಿ ಯಾವ ಆಧಾರದ ಮೆಲೆ ಸಾಯಿ ಲಕ್ಷ್ಮೀ ರವರಿಗೆ ಖಾತೆ ಪಹಣಿ ಆಗಿರುತ್ತದೆ ಎಂದರೆ ಆಗಿದೆ. ನಿಪಿ 33 ರ ಪ್ರಕಾರ ಯಾರಿಗೂ ನೋಟಿಸು ಹೋಗಿರುವುದಿಲ್ಲ. ಸಾಯಿ ಲಕ್ಷ್ಮಿ ಗಂಡ ಶ್ರೀನಾಥ ಯಾವಾಗ ತೀರಿಕೊಂಡಿರುತ್ತಾರೆ

ಎಂದರೆ 2020 ನೇ ಇಸವಿಯಲ್ಲಿ ಎನ್ನುನತ್ತಾರೆ. ನಿಪಿ 34 ರ ಪ್ರಕಾರ ಶ್ರೀನಾಥ ರವರ ಹೇಂಡತಿ ಸಾಯಿ ಲಕ್ಷ್ಮೀ ರವರಿಗೆ ನೋಟಿಸು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.